# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 05.08.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ಪೂರ್ವ ತಾಲ್ಲೂಕು ಕೆ.ಆರ್. ಪುರಂ ಹೋಬಳಿ ನಲ್ಲೂರಳ್ಳಿ ಗ್ರಾಮದ ಸ. ನಂ.4 ರಲ್ಲಿ 20 ಎಕರೆ 34 ಗುಂಟೆ ಸರ್ಕಾರಿ ಕೆರೆ ಪ್ರದೇಶವಿದ್ದು, ಸದರಿ ಕೆರೆಯಲ್ಲಿ 0-15, 0-05 ಮತ್ತು 0-07 ಗುಂಟೆ ಜಮೀನನ್ನು ಕ್ರಮವಾಗಿ ಬಾಜು ಸ.ನಂ.85, 86 ಮತ್ತು 89ರ ಹಿಡುವಳಿದಾರರು ಕಾನೂನು ಬಾಹಿರವಾಗಿ ಒತ್ತುವರಿಯನ್ನು ಮಾಡಿಕೊಂಡು ಸ್ವಾಧೀನದಲ್ಲಿದ್ದು, ಈ ಬಗ್ಗೆ ಪಾಲಿಕೆ ವತಿಯಿಂದ ಕೆರೆಯ ಪ್ರದೇಶವನ್ನು ಮೋಜಣಿ ಕೈಗೊಂಡು ಸದರಿ ನಕ್ಷೆಯ ದೃಢೀಕರಣಕ್ಕಾಗಿ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರಿಗೆ ಕಳುಹಿಸಿದ್ದ ಮೇರೆಗೆ ತಹಶೀಲ್ದಾರ್‌ರವರು ದೃಢೀಕರಿಸಿದ್ದು, ಕೆರೆಯ ಪ್ರದೇಶದಲ್ಲಿ 27 ಗುಂಟೆ ಅತಿಕ್ರಮಣ ಮಾಡಿ ಶೆಡ್‌ಗಳನ್ನು ಮತ್ತು ಕಾಂಪೌಂಡ್ ಕಟ್ಟಡ ನಿರ್ಮಾಣ ಮಾಡಿರುವುದು ದೃಢಪಟ್ಟಿರುತ್ತದೆ. ಈ ಬಗ್ಗೆ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರು ಅತಿಕ್ರಮಣದಾರರಿಗೆ ದಿನಾಂಕ: 17.06.2011 ರಂದು ನೋಟಿಸ್ ಜಾರಿ ಮಾಡಿ, ವಿಚಾರಣೆ ನಡೆಸಿ, ತೆರವು ಆದೇಶ ಹೊರಡಿಸಿದ್ದ ಮೇರೆಗೆ ಪರಿಸರ ಕೋಶ (ಕೆರೆಗಳು), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ವತಿಯಿಂದ ತೆರವು ಕಾರ್ಯಾಚರಣೆ ಹಮ್ಮಿಕೊಂಡು, ಅನಧಿಕೃತ ಶೆಡ್‌ಗಳು ಮತ್ತು ತಂತಿ ಬೇಲಿಯನ್ನು ತೆರವುಗೊಳಿಸಿ, ಒತ್ತುವರಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆದುಕೊಂಡು ಬಿಬಿಎಂಪಿ ವತಿಯಿಂದ ಚೈನ್ ಲಿಂಕ್ ತಂತಿ ಬೇಲಿ ನಿರ್ಮಿಸಲಾಗಿದೆ.

ಸದರಿ ಕಾರ್ಯಾಚರಣೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪರಿಸರ ಕೋಶದ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಸಹಾಯಕ ಅಭಿಯಂತರರು, ಬಿ.ಎಂ.ಟಿ.ಎಫ್. ಕಾರ್ಯಪಡೆ ಮತ್ತು ಇತರೆ ಸಿಬ್ಬಂದಿಗಳೊಂದಿಗೆ ಕಾರ್ಯಾಚರಣೆಯನ್ನು ನಡೆಸಲಾಗಿರುತ್ತದೆ ಎಂದು ಕಾರ್ಯಪಾಲಕ ಅಭಿಯಂತರರು, ಪರಿಸರ ಕೋಶ (ಕೆರೆಗಳು) ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**